**ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾಧಂ ರವರ ನ್ಯಾಯಾಲಯ, ಕೊಳ್ಳೇಗಾಲ**

**ಓ .ಎಸ್ . ನಂ. 28/2013**

**ಸಿಡಬ್ಲ್ಯೂ: 1**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಸಿಂಗಾರಶೆಟ್ಟಿ |
| ತಂದೆಯ ಹೆಸರು | : | ತಿಮ್ಮಶೆಟ್ಟಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ತಾಲ್ಲೂಕು ಭೂಮಾಪಕರು, ಹನೂರು ತಾಲ್ಲೂಕು. |
| ವಾಸ ಸ್ಥಳ | : | ಹನೂರು |

**ದಿನಾಂಕ : 28.03.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: –**

ನಾನು ನ್ಯಾಯಾಲಯದಿಂದ ಕಮೀಷನರ್ ವಾರೆಂಟ್ ಪಡೆದುಕೊಂಡು ದಿನಾಂಕ 03.02.2025 ರಂದು ವಾದಿ, ಪ್ರತಿವಾದಿಗಳಿಗೆ ಅಳತೆ ಕಾರ್ಯಕ್ಕೆ ದಿನಾಂಕ 11.02.2025 ನ್ನು ನಿಗದಿಪಡಿಸಿ ನೋಟೀಸು ನೀಡಿರುತ್ತೇನೆ. ಅದರಂತೆ ದಿನಾಂಕ 11.02.2025 ರಂದು ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ವಾದಿ ಹಾಗೂ 1ನೇ ಪ್ರತಿವಾದಿ ಹಾಜರಿದ್ದು, ನ್ಯಾಯಾಲಯದಿಂದ ಪಡೆದುಕೊಂಡಿದ್ದ ದಾಖಲೆಗಳನ್ನು ಹಾಗೂ ಮೂಲ ಕ್ರಯಪತ್ರವನ್ನು ಪರಿಶೀಲಿಸಿ ಪಕ್ಷಗಾರರು ಸ್ಥಳ ತೋರಿಸಿದ ಮೇರೆಗೆ ನಾನು ದಾವಾ ಆಸ್ತಿಗಳನ್ನು ಅಳತೆ ಮಾಡಿ ಸ್ಥಳದಲ್ಲಿ ಮಹಜರ್ ಬರೆದು ಸದರಿ ಮಹಜರ್ ಗೆ ವಾದಿ ಸಹಿ ಮಾಡಿರುತ್ತಾರೆ. 1ನೇ ಪ್ರತಿವಾದಿ ಸಹಿ ಮಾಡಲು ನಿರಾಕರಿಸಿರುತ್ತಾರೆ. ನಂತರ ಅಳತೆ ಮಾಡಿದ ಆಧಾರದ ಮೇಲೆ ಕಚೇರಿಗೆ ಬಂದು ಸ್ಕೆಚ್ ತಯಾರಿಸಿ ನ್ಯಾಯಾಲಯಕ್ಕೆ ದಿನಾಂಕ 15.03.2025 ರಂದು ವರದಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ಹಾಜರುಪಡಿಸಿರುವ ವರದಿಯನ್ನು ನಿಸಿ–1 ಎಂದು, ನಕ್ಷೆಯನ್ನು ನಿಸಿ–2 ಎಂದು, ಮಹಜರ್ ನ್ನು ನಿಸಿ–3 ಎಂದು, ನೋಟೀಸ್ ನ್ನು ನಿಸಿ–4 ಎಂದು, ಅಂಚೆ ರಶೀದಿಗಳನ್ನು ನಿಸಿ–5 ರಿಂದ 9 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ ಪಿ.ಡಿ.ಪಿ. 1ನೇ ಪ್ರತಿವಾದಿ ಪರ ವಕೀಲರಿಂದ:**

ನಾನು ಅಳತೆ ಮಾಡುವ ಸಂದರ್ಭದಲ್ಲಿ ಮೂಲ ಸರ್ವೆ ಕಲ್ಲನ್ನು ಗುರುತಿಸಿ ಅಲ್ಲಿಂದ ಅಳತೆ ಪ್ರಾರಂಭ ಮಾಡಿರುತ್ತೇನೆ. ಅಳತೆ ಕಾರ್ಯ ಮಾಡುವಾಗ ಗ್ರಾಮ ನಕ್ಷೆ ಹಾಗೂ ಆಸ್ತಿಗಳ ಮೂಲ ನಕ್ಷೆಯನ್ನು ಪರಿಶೀಲನೆ ಮಾಡಿ ಅದರಂತೆ ಅಳತೆ ಮಾಡುತ್ತೇವೆ ಎಂದರೆ ಸರಿ. ನಿಸಿ–1ರ ನಕ್ಷೆಯಂತೆ ಸರ್ವೆ ನಂಬರ್ 440 ರಲ್ಲಿ ಒಟ್ಟಾರೆ 11 ಎಕರೆ 67 ಸೆಂಟ್ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 440 ರ ಆರ್.ಟಿ.ಸಿ. ಗಳಲ್ಲಿ ಎನ್. ಅನಂತರಾಜು ಬಿನ್ ಲೇಟ್ ನಾರಾಯಣಸ್ವಾಮಿ ಶೆಟ್ಟಿ , ಸರ್ಕಾರಿ, ಮಾದೇಗೌಡ ಎಂಬುವವರುಗಳ ಹೆಸರುಗಳು ನಮೂದಾಗಿದೆ ಎಂದರೆ ಸರಿ. ಅಳತೆ ಕಾರ್ಯದ ಸಮಯದಲ್ಲಿ ಸದರಿರವರುಗಳಿಗೆ ನೋಟೀಸು ನೀಡಿರುವುದಿಲ್ಲ. ವಾದಿಗಳ ಸ್ವಾಧೀನದಲ್ಲಿರುವ ಸ್ವತ್ತನ್ನು ನಿಸಿ–2ರ ನಕ್ಷೆಯಲ್ಲಿ ಎ ಬಿ ಜಿ ಎಫ್ ಎಂದು

ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಒಂದು ಬೋರ್ ವೆಲ್ ಹಾಗೂ ಮನೆ ಇರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿ.

ಸರ್ವೆ ನಂಬರ್ 441/2 ರ 11 ಸೆಂಟ್ ವಿಸ್ತೀರ್ಣದಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದು ನಿಸಿ-2ರ ನಕ್ಷೆಯಲ್ಲಿ ತೋರಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ್ 441/3ರ ಪೈಕಿ 1 ಎಕರೆ 25 ಸೆಂಟ್ ವಿಸ್ತೀರ್ಣದಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದು ನಿಸಿ-2ರ ನಕ್ಷೆಯಲ್ಲಿ ತೋರಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ್ 514 ರಲ್ಲಿ 1 ಎಕರೆ 60 ಸೆಂಟ್ ವಿಸ್ತೀರ್ಣದಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದು ನಿಸಿ-2ರ ನಕ್ಷೆಯಲ್ಲಿ ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಗಳ ಖಾತೆಯು ವಾದಿಯ ಹೆಸರಿನಲ್ಲಿ ನಮೂದಾಗಿಲ್ಲ ಎಂದರೆ ಸರಿ. ಸರ್ವೆ ನಂಬರ್ 441/1ರ 50 ಸೆಂಟ್ ವಿಸ್ತೀರ್ಣದಲ್ಲಿ ವಾದಿಗಳು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 514 ರಲ್ಲಿ ವಾದಿಗಳು 1 ಎಕರೆ 60 ಸೆಂಟ್ ವಿಸ್ತೀರ್ಣದಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ವಾದಿಗಳು ನಿಸಿ-2ರ ನಕ್ಷೆಯಲ್ಲಿ ತೋರಿಸಿರುವ ಆಸ್ತಿಯಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತಾರೆ ಬೇರೆ ಆಸ್ತಿಗಳಲ್ಲಿ ಸ್ವಾಧೀನದಲ್ಲಿರುವುದಿಲ್ಲ. ವಾದಿಗಳು ಹಾಜರುಪಡಿಸಿದ ಕ್ರಯಪತ್ರದಂತೆ ಅವರು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ